ದಿಃ 08.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಎ., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ನಿ.ಪಿ.1 ಕರಾರು ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ನನ್ನ ಜೊತೆ ಆಂಥೋನಿ ಎನ್ನುವವರು ನಿ.ಪಿ.1 ಕರಾರು ಪತ್ರಕ್ಕೆ ಸಹಿ ಹಾಕಿರುತ್ತಾರೆ ಆಂಥೋನಿಯವರು ನಿ.ಪಿ.1 ದಾಖಲೆಿಗೆ ಸಹಿ ಹಾಕಿರುವುದನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಸದರಿ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.1(ಸಿ) ಎಂದು ಗುರುತಿಸಲಾಯಿತು. ಅಪ್ಪಯ್ಯ ಆಚಾರ್ ರವರು ಮತ್ತು ಪೌಲ್ ಡಿಸೋಜಾ ರವರ ನಡುವೆ ಸದರಿ ಕರಾರು ಪತ್ರ ಆಗಿರುತ್ತದೆ. ಅಪ್ಪಯ್ಯ ಆಚಾರ್ ಮತ್ತು ಪೌಲ್ ಡಿಸೋಜಾ ರವರು ಈಗ ಮೃತಪಟ್ಟಿರುತ್ತಾರೆ. ನನ್ನ ಸಮಕ್ಷಮ ಅಪ್ಪಯ್ಯ ಆಚಾರ್ ರವರು ಮತ್ತು ಪೌಲ್ ಡಿಸೋಜಾ ರವರು ನಿ.ಪಿ.1 ದಾಖಲೆಗೆ ಸಹಿ ಮಾಡಿರುತ್ತಾರೆ. ನಾನು ಅಪ್ಪಯ್ಯ ಆಚಾರ್ ಮತ್ತು ಪೌಲ್ ಡಿಸೋಜಾ ರವರು ಸಹಿ ಮಾಡುವಾಗ ಕಣ್ಣಾರೆ ನೋಡಿರುತ್ತೇನೆ. ಅಪ್ಪಯ್ಯ ಆಚಾರ್ ರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.1(ಡಿ) ಎಂದು ಗುರುತಿಸಲಾಯಿತು, ಪೌಲ್ ಡಿಸೋಜಾ ರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.1(ಇ) ಎಂದು ಗುರುತಿಸಲಾಯಿತು, ಅಪ್ಪಯ್ಯ ಆಚಾರ್ ರವರ ಇತರ ಸಹಿಗಳನ್ನು ಸಾಕ್ಷಿಯು ನಿ.ಪಿ.1 ದಾಖಲೆಯನ್ನು

ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿ.ಪಿ.1(ಎಫ್) ರಿಂದ ನಿ.ಪಿ.1(ಹೆಚ್) ಎಂದು ಗುರುತಿಸಲಾಯಿತು, ಪೌಲ್ ಡಿಸೋಜಾ ರವರ ಇತರ ಸಹಿಗಳನ್ನು ಸಾಕ್ಷಿಯು ನಿ.ಪಿ.1 ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿ.ಪಿ.1(ಐ) ಎಂದು ಗುರುತಿಸಲಾಯಿತು. ಅಪ್ಪಯ್ಯ ಆಚಾರ್ ರವರ ಪತ್ನಿಯು ನಿ.ಪಿ.1 ದಾಖಲೆಗೆ ಸಹಿ ಮಾಡಿರುತ್ತಾರೆ. ಅಪ್ಪಯ್ಯ ಆಚಾರ್ ರವರ ಪತ್ನಿ ಭವಾನಿ ರವರ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.1(ಜೆ) ಮತ್ತು ನಿ.ಪಿ.1(ಕೆ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಕೆ.ಎಂ.ಪಿ., ವಕೀಲರಿಂದ ಪ್ರತಿವಾದಿ ಪರವಾಗಿ

3. ಪಾಟೀ ಸವಾಲು ಮಾಡಲು ಕಾಲವಕಾಶ ಕೇಳಿದ್ದು ಪಾಟೀ ಸವಾಲಿಗೆ ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾಧಿಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 03.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ಶ್ರೀ ಕೆ.ಎಂ.ಪಿ., ವಕೀಲರಿಂದ ಪ್ರತಿವಾದಿ ಪರವಾಗಿ</u>

4. ನನ್ನ ಹುಟ್ಟಿದ ದಿನಾಂಕ ನನಗೆ ನೆನಪಿಲ್ಲ. ನಾನು 4 ನೇ ತರಗತಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಕನ್ನಡದಲ್ಲಿ ಬರೆದಿರುವ ದಾಖಲೆಯನ್ನು ನೋಡಿದರೆ ನನಗೆ ಸ್ವಲ್ಪ ಸ್ವಲ್ಪ ಗೊತ್ತಾಗುತ್ತದೆ. ಅಣಜೂರು ಗ್ರಾಮದಿಂದ ಚಿನ್ನಿಗ ಗ್ರಾಮಕ್ಕೆ 4 ಕಿ.ಮೀ ಅಂತರ ಇರುತ್ತದೆ. ಚಿನ್ನಿಗ ಗ್ರಾಮದಲ್ಲಿ ನನಗೆ ಯಾವುದೇ ರೀತಿ ಆಸ್ತಿಗಳು ಇರುವುದಿಲ್ಲ. ಅಣಜೂರು ಗ್ರಾಮದಲ್ಲಿ ನನಗೆ ಸರ್ವೆ ನಂಬರ್ 94, 42, 43 ಮತ್ತು 45 ರಲ್ಲಿ ಜಮೀನು ಇರುತ್ತದೆ. ಸದರಿ ಸರ್ವೆ ನಂಬರ್ ಗಳು ನನ್ನ ಹೆಸರಿನಲ್ಲಿ ಖಾತೆ ಇರುತ್ತದೆ. ಸುಮಾರು 1 ವರ್ಷಗಳಿಂದ ಸದರಿ ಜಮೀನಿನ ಖಾತೆಗಳು ನನ್ನ ಹೆಸರಿನಲ್ಲಿ ಇರುತ್ತದೆ. ವಾದಿಗಳು ನನಗೆ ಸುಮಾರು 20 ವರ್ಷಗಳಿಂದ ಪರಿಚಯ ಇರುತ್ತಾರೆ. ವಾದಿಗಳು ಚಿನ್ನಿಗ ಗ್ರಾಮದಲ್ಲಿ ವಾಸವಾಗಿರುವುದಿಲ್ಲ, ವಾದಿಗಳು ಮದುವೆಯಾಗಿ ಬೇರೆ ಬೇರೆ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಪ್ರತಿವಾದಿಗಳು 25 ವರ್ಷಗಳಿಂದ ಪರಿಚಯ ಇರುತ್ತಾರೆ. 2 ಮತ್ತು 3 ನೇ ಪ್ರತಿವಾದಿಗೆ ಈಗ ಎಷ್ಟು ವಯಸ್ಸಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಗೆ ಈಗ 19 ವರ್ಷ ವಯಸ್ಸಾಗಿರುತ್ತದೆ. ವಾದಿಗಳ ತಂದೆಯ ಹೆಸರು ಪೌಲ್ ಡಿಸೋಜ ಆಗಿರುತ್ತದೆ. ಪೌಲ್ ಡಿಸೋಜ ರವರು ಚಿನ್ನಿಗ ಗ್ರಾಮದ ವಾಸಿಯಾಗಿರುತ್ತಾರೆ. ಪೌಲ್ ಡಿಸೋಜ ರವರು ಚಿನ್ನಿಗ ಗ್ರಾಮದಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೌಲ್ ಡಿಸೋಜ ರವರ ಮನೆಯ ಆಸುಪಾಸಿನಲ್ಲಿ ವಾಸವಾಗಿರುವ ಜನರ ಹೆಸರು ನನಗೆ ಗೊತ್ತಿಲ್ಲ. 2 ರಿಂದ 4 ನೇ ಪ್ರತಿವಾದಿಗಳ ತಂದೆಯ ಪರಿಚಯ ನನಗೆ ಇರುತ್ತದೆ. ನನಗೆ ಅಪ್ಪಯ್ಯ ಆಚಾರ್ ರವರು ನನಗೆ ನನ್ನ ತಂದೆಯಿಂದ ಪರಿಚಯವಾಗಿರುತ್ತಾರೆ.

ಅಪ್ಪಯ್ಯ ಆಚಾರ್ ರವರು ಚಿನ್ನಿಗ ಗ್ರಾಮದಲ್ಲಿ ವಾಸವಾಗಿದ್ದರು. ಚಿನ್ನಿಗ ಗ್ರಾಮಕ್ಕೂ ಜನ್ನಾಪುರಕ್ಕೂ 2 ಕಿ.ಮೀ ಅಂತರ ಇರುತ್ತದೆ. ನಾನು ಈಗ ವ್ಯವಸಾಯ ಮಾಡಿಕೊಂಡಿರುತ್ತೇನೆ. ನಾನು ಮರಳು ಮಾರಾಟ ವ್ಯವಹಾರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪ್ಪಯ್ಯ ಆಚಾರ್ ರವರಿಗೆ ಸೇರಿದ ಆಸ್ತಿಯಲ್ಲಿ ನಾನು ಸುಮಾರು 6 ವರ್ಷಗಳ ಕಾಲ ಮರಳು ಶೇಕರಣೆ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಮರಳು ಶೇಕರಣೆ ಮಾಡಲು ವಿರೋಧ ಮಾಡಿದ ಕಾರಣ ನಾನು ಪ್ರತಿವಾದಿಗಳ ವಿರುದ್ದ ಈ ದಾವೆಯಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಈಗ ಎಷ್ಟು ವರ್ಷ ವಯಸ್ಸಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

5. ಅಪ್ಪಯ್ಯ ಆಚಾರ್ ರವರಿಗೆ ಚಿನ್ನಿಗ ಗ್ರಾಮದ ಸರ್ವೆ ನಂಬರ್ 17 ರಲ್ಲಿ ಆಸ್ತಿ ಇರುತ್ತದೆ. ಸದರಿ ಆಸ್ತಿಯ ವಿಸ್ತೀರ್ಣ 15 ಗುಂಟೆ ಇರುತ್ತದೆ. 1 ಎಕರೆಗೆ ಎಷ್ಟು ಗುಂಟೆ ವಿಸ್ತೀರ್ಣ ಎಂದು ನನಗೆ ಗೊತ್ತಿಲ್ಲ. ದಾವ ಆಸ್ತಿಯು ಜನ್ನಾಪುರದಿಂದ 2 ಕಿ.ಮೀ ಅಂತರದಲ್ಲಿ ಇರುತ್ತದೆ. ಜನ್ನಾಪುರ ಸರ್ಕಲ್ ನಲ್ಲಿ ಯಾವ ದಿಕ್ಕಿಗೆ ದಾವ ಆಸ್ತಿಯು ಬರುತ್ತದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ದಾವ ಆಸ್ತಿಯ ಪೂರ್ವಕ್ಕೆ ಯಾರ ಆಸ್ತಿ ಇರುತ್ತದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ದಾವ ಆಸ್ತಿಯ ಚಕ್ಕುಬಂದಿ ನನಗೆ ಗೊತ್ತಿಲ್ಲ ಮತ್ತು ದಾವ ಆಸ್ತಿಯ ಚಕ್ಕುಬಂದಿಯಲ್ಲಿ ಯಾವ ಯಾವ ಸರ್ವೆ ನಂಬರ್ ನ ಆಸ್ತಿಗಳು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪ್ಪಯ್ಯ ಆಚಾರ್ ರವರಿಗೆ ಆಸ್ತಿಯು ಸರ್ಕಾರದಿಂದ ಮಂಜೂರಾತಿ ಮೂಲಕ ಬಂದಿರುತ್ತದೆ. ಸಾಕ್ಷಿಯು ಮುಂದುವರೆದು ಅಪ್ಪಯ್ಯ ಆಚಾರ್ ರವರಿಗೆ ಸಾಗುವಳಿ ಚೀಟಿಯ ಮೂಲಕ ದಾವ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಾವ ಆಸ್ತಿಯು ಮಂಜೂರಾಗುವ ಪೂರ್ವದಲ್ಲಿ ಅಪ್ಪಯ್ಯ ಆಚಾರ್ ರವರು ಸದರಿ ಆಸ್ತಿಯಲ್ಲಿ ಸ್ವಾಧೀನ

ಹೊಂದಿದ್ದರು. ಯಾವ ಇಸವಿಯಿಂದ ಅಪ್ಪಯ್ಯ ಆಚಾರ್ ರವರು ಸದರಿ ಆಸ್ತಿಯಲ್ಲಿ ಸ್ವಾಧೀನ ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಮಂಜೂರಿ ಮಾಡಲು ಅಪ್ಪಯ್ಯ ಆಚಾರ್ ರವರು ಯಾವಾಗ ಅರ್ಜಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅಪ್ಪಯ್ಯ ಆಚಾರ್ ರವರಿಗೆ ಮಂಜೂರಿ ಆಗಿರುವ ಆಸ್ತಿಯ ನಡವಳಿಕೆಗೆ ನಾನು ಸಹಿ ಹಾಕಿರುವುದಿಲ್ಲ. ಯಾವ ಇಸವಿಯಲ್ಲಿ ಅಪ್ಪಯ್ಯ ಆಚಾರ್ ರವರಿಗೆ ಸದರಿ ಆಸ್ತಿಯು ಮಂಜೂರಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪ್ಪಯ್ಯ ಆಚಾರ್ ರವರ ಸಾಗುವಳಿ ಚೀಟಿಯನ್ನು ನಾನು ನೋಡಿರುತ್ತೇನೆ. ದಿಃ 10.11.2014 ರಂದು ನಾನು ಅಪ್ಪಯ್ಯ ಆಚಾರ್ ರವರ ಸಾಗುವಳಿ ಚೀಟಿಯನ್ನು ನೋಡಿರುತ್ತೇನೆ. ಸದರಿ ಸಾಗುವಳಿ ಚೀಟಿಯಲ್ಲಿ 15 ವರ್ಷ ಪಾರಬಾರೆ ಮಾಡಬಾರದು ಎಂದು ನಿಭಂದನೆ ಇರುವುದನ್ನು ನಾನು ಓದಿ ನೋಡಿರುತ್ತೇನೆ. ಸಾಗುವಳಿ ಚೀಟಿಯನ್ನು ಯಾವ ದಿನಾಂಕ ನೀಡಿರುತ್ತದೆ ಎಂದು ಸದರಿ ಸಾಗುವಳಿ ಚೀಟಿಯಲ್ಲಿ ದಿನಾಂಕ ನಮೂದು ಇತ್ತು, ಆದರೆ ನನಗೆ ಈಗ ನೆನಪಿಲ್ಲ. ಸಾಗುವಳಿ ಚೀಟಿಯಲ್ಲಿ ಆಸ್ತಿಯ ಚಕ್ಕುಬಂದಿಯಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಗುವಳಿ ಚೀಟಿಯಲ್ಲಿ ನಡವಳಿಗೆ ಸಂಖ್ಯೆಯನ್ನು ಬರೆದಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಸಾಗುವಳಿ ಚೀಟಿಗೆ ನಂಬರ್ ನೀಡಿರುವ ಬಗ್ಗೆ ನನಗೆ ನೆನಪಿಲ್ಲ. ನನಗೆ ಅಪ್ಪಯ್ಯ ಆಚಾರ್ ರವರು ಆತ್ಮೀಯರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ಅವರ ಪರವಾಗಿ ಸಾಕ್ಷಿ ನುಡಿಯಬೇಕು ಎಂದು ಕೋರಿಕೊಂಡ ಕಾರಣ ನಾನು ವಾದಿಗಳ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಅಪ್ಪಯ್ಯ ಆಚಾರ್ ರವರು ಸುಮಾರು 7-8 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಅಪ್ಪಯ್ಯ ಆಚಾರ್ ರವರು ಚಿನ್ನಿಗ ಗ್ರಾಮದಲ್ಲಿಯೇ ಅವರ ಮನೆಯಲ್ಲಿಯೇ ಮೃತಪಟ್ಟಿರುತ್ತಾರೆ. ಅಪ್ಪಯ್ಯ ಆಚಾರ್ ರವರ

ಹಣಕಾಸಿನ ಮತ್ತು ಜಾಗದ ವ್ಯವಹಾರದಲ್ಲಿ ನಾನು ಭಾಗಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಜಾಗದ ವ್ಯವಹಾರದಲ್ಲಿ ನಾನು ಭಾಗಿಯಾಗಿರುತ್ತೇನೆ ಎಂದು ನುಡಿಯುತ್ತಾರೆ. ಅಪ್ಪಯ್ಯ ಆಚಾರ್ ರವರ ಬಡಗಿ ವ್ಯವಹಾರದಲ್ಲಿ ನಾನು ಭಾಗಿಯಾಗಿರುವುದಿಲ್ಲ. ದಿಃ 10.11.2014 ರಂದು ನಾನು ಅಪ್ಪಯ್ಯ ಆಚಾರ್ ರವರ ಜಮೀನಿನ ವ್ಯವಹಾರದಲ್ಲಿ ಭಾಗಿಯಾಗಿರುತ್ತೇನೆ. ಅಪ್ಪಯ್ಯ ಆಚಾರ್ ರವರ ಜಮೀನಿನ ವ್ಯವಹಾರದ ಬಗ್ಗೆ ದಿಃ 10.11.2014 ರಂದು ನಾನು ಮೂಡಿಗೆರೆಯ ಪಿ.ಎಲ್.ಡಿ ಬ್ಯಾಂಕಿನ ಬಳಿ ಸದರಿ ವ್ಯವಹಾರದಲ್ಲಿ ಭಾಗಿಯಾಗಿರುತ್ತೇನೆ. ಸದರಿ ದಿನ 11.00 ರಿಂದ ಮಧ್ಯಾಹ್ನ 01.00 ಗಂಟೆ ವರೆಗೆ ಸದರಿ ವ್ಯವಹಾರ ನಡೆದಿರುತ್ತದೆ. ಸದರಿ ವ್ಯವಹಾರದಲ್ಲಿ ಅಪ್ಪಯ್ಯ ಆಚಾರ್, 1 ರಿಂದ 3 ನೇ ಪ್ರತಿವಾದಿಗಳು ಮತ್ತು ಅಂಥೋನಿ ಯವರು ಭಾಗಿಯಾಗಿದ್ದರು. ದಿಃ 10.11.2014 ರಂದು ಪಿ.ಎಲ್.ಡಿ ಬ್ಯಾಂಕ್ ಬಳಿ ಯಾವುದೇ ಭರವಣಿಯಾಗಿರುವುದಿಲ್ಲ. ದಿಃ 10.11.2014 ರಂದು ನಾನಾಗಲಿ, ಅಂಥೋನಿಯವರಾಗಲಿ  ಯಾವುದೇ ದಾಖಲೆಗೆ ಸಹಿ ಹಾಕಿರುವುದಿಲ್ಲ. ಸದರಿ ದಿನ ವಾರದ ಯಾವ ದಿನ ಆಗಿತ್ತು ಎಂದು ನನಗೆ ಈಗ ನೆನಪಿಲ್ಲ. ದಿಃ 10.11.2014 ರಂದು ಅಪ್ಪಯ್ಯ ಆಚಾರ್ ರವರು ಛಾಪಾ ಕಾಗದವನ್ನು ಅಂದಾಜು 11.00 ಗಂಟೆಗೆ ಖರೀದಿ ಮಾಡಿರುತ್ತಾರೆ. ಅಪ್ಪಯ್ಯ ಆಚಾರ್ ರವರ ಹೆಸರಿನಲ್ಲಿಯೇ ಛಾಪಾ ಕಾಗದವನ್ನು ಖರೀದಿ ಮಾಡಿರುತ್ತಾರೆ. ದಿಃ 10.11.2014 ಅನ್ನು ಹೊರತು ಪಡಿಸಿ ಬೇರೆ ಯಾವತ್ತೂ ನಾನು ಅಪ್ಪಯ್ಯ ಆಚಾರ್ ರವರ ಆಸ್ತಿಯ ವ್ಯವಹಾರದಲ್ಲಿ ಭಾಗಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 10.11.2014 ರಂದು ಮೂಡಿಗೆರೆ ಪಿ.ಎಲ್.ಡಿ ಬ್ಯಾಂಕ್ ಬಳಿ ಬರುವಂತೆ ನನಗೆ ಅಪ್ಪಯ್ಯ ಆಚಾರ್ ರವರು ತಿಳಿಸಿರುತ್ತಾರೆ. ಅಂಥೋನಿಯವರು ಸದರಿ ದಿನ 12.00 ಗಂಟೆ ಸಮಯದಲ್ಲಿ ಮೂಡಿಗೆರೆ

ಪಿ.ಎಲ್.ಡಿ ಬ್ಯಾಂಕ್ ಬಳಿ ಬಂದಿರುತ್ತಾರೆ.

7. ದಿಃ 10.11.2014 ರಂದು ವಾದಿಗಳು ಮತ್ತು ಅವರ ತಂದೆ ಪೌಲ್ ಡಿಸೋಜ ರವರು ಮೂಡಿಗೆರೆಯ ಪಿ.ಎಲ್.ಡಿ ಬ್ಯಾಂಕ್ ಬಳಿ ಬಂದಿರುವುದಿಲ್ಲ. ಅಪ್ಪಯ್ಯ ಆಚಾರ್ ರವರು ಯಾವ ವಿಚಾರವಾಗಿ ಪಿ.ಎಲ್.ಡಿ ಬ್ಯಾಂಕ್ ಬಳಿ ಬರಬೇಕು ಎಂದು ದಿಃ 10.11.2014 ರ ಪೂರ್ವದಲ್ಲಿ ನನಗೆ ತಿಳಿಸಿದ್ದರು. ದಿಃ 10.11.2014 ರ ಒಂದು ವಾರದ ಪೂರ್ವದಲ್ಲಿ ನನಗೆ ಅಪ್ಪಯ್ಯ ಆಚಾರ್ ರವರು ಪಿ.ಎಲ್.ಡಿ ಬ್ಯಾಂಕ್ ಬಳಿ ಬರಬೇಕು ಎಂದು ಜನ್ನಾಪುರದಲ್ಲಿ ನನಗೆ ತಿಳಿಸಿರುತ್ತಾರೆ. ದಿಃ 10.11.2014 ರ ಪೂರ್ವದಲ್ಲಿ ನಾನು ಅಪ್ಪಯ್ಯ ಆಚಾರ್ ರವರ ಜಮೀನಿನ ವಿಚಾರವಾಗಿ ವ್ಯವಹಾರದಲ್ಲಿ ಭಾಗಿಯಾಗಿರುತ್ತೇನೆ. ಯಾವ ದಿನಾಂಕ ನಾನು ಆ ರೀತಿ ಭಾಗಿಯಾಗಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಆಸ್ತಿ ವಿಚಾರವಾಗಿ ಅಪ್ಪಯ್ಯ ಆಚಾರ್ ರವರು ನನಗೆ ಜನ್ನಾಪುರದಲ್ಲಿ ತಿಳಿಸಿರುತ್ತಾರೆ. ಅಪ್ಪಯ್ಯ ಆಚಾರ್ ರವರು 100 x 100 ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ನನ್ನ ಬಳಿ ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನಾನಾಗಿಯೇ ಬಂದಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರು ಮಾಡಲು ಆದಿತ್ಯ ವಕೀಲರ ಬಳಿ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಸದರಿ ಮಾಹಿತಿಯನ್ನು 2 ವರ್ಷದ ಪೂರ್ವದಲ್ಲಿ ನೀಡಿರುತ್ತೇನೆ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ. ನೀಡಲಾಗಿದೆ. )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿಃ 07.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಎಂ.ಪಿ ವಕೀಲರಿಂದ

8. ಚಿನ್ನಿಗ ಗ್ರಾಮದ ಸರ್ವೆ ನಂಬರ್ 17 ರ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಸುಮಾರು 10 ವರ್ಷಗಳ ಹಿಂದೆ ನಾನು ಸದರಿ ದಾಖಲಾತಿಗಳನ್ನು ನೋಡಿರುತ್ತೇನೆ. ಚಿನ್ನಿಗ ಗ್ರಾಮದ ಸರ್ವೆ ನಂಬರ್ 17 ರಲ್ಲಿ ಒಟ್ಟು ಆಸ್ತಿ 15 ಗುಂಟೆ ವಿಸ್ತೀರ್ಣ ಇತ್ತು. ಚಿನ್ನಿಗ ಗ್ರಾಮದ ಸರ್ವೆ ನಂಬರ್ 17 ಕ್ಕೆ ಸಂಬಂಧಪಟ್ಟ ಹಕ್ಕು ಪತ್ರವನ್ನು ನಾನು ನೋಡಿರುತ್ತೇನೆ. ನಾನು ಸಹಿ ಮಾಡಿರುವ ಸರ್ವೆ ನಂಬರ್ 17 ರ ದಾಖಲಾತಿಯು ಸರ್ವೆ ನಂಬರ್ 17 ರ ಯಾವ ದಿಕ್ಕಿನಲ್ಲಿ ಇರುವ ಆಸ್ತಿಗೆ ಸಂಬಂಧ ಪಟ್ಟ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ನಿಪಿ-1 ದಾಖಲಾತಿಯಲ್ಲಿ ಚೆಕ್ಕು ಬಂದಿ ಬರೆದಿರುತ್ತದೆ. ಆದರೆ ನನಗೆ ಚೆಕ್ಕು ಬಂದಿ ನನಗೆ ನೆನಪಿಲ್ಲ. ಚೆಕ್ಕು ಬಂದಿಯನ್ನು ನಿಪಿ-1 ರಲ್ಲಿ ಎಷ್ಟು ಬಾರಿ ನಮೂದು ಆಗಿರುತ್ತದೆ ಎಂದು ನೆನಪಿಲ್ಲ. ನಿಪಿ-1 ದಾಖಲಾತಿಗೆ ನಾನು ಕೆ.ಎಸ್. ಆದಿತ್ಯ ರವರ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ನಿಪಿ-1 ದಾಖಲಾತಿಗೆ ನಾನು ಮೂಡಿಗೆರೆ ಪೊಲೀಸ್ ಠಾಣೆ ಯ ಮುಂಭಾಗದ ಪಿ.ಎಲ್.ಡಿ ಬ್ಯಾಂಕ್ ಬಳಿ ಸಹಿ ಮಾಡಿರುತ್ತೇನೆ. ನಿಪಿ-1 ದಾಖಲಾತಿಗೆ ನಾನು ಪಿ.ಎಲ್.ಡಿ ಬ್ಯಾಂಕ್‌ನ ಹೊರ ಭಾಗದಲ್ಲಿ ಸಹಿ ಮಾಡಿರುತ್ತೇನೆ. ನಿಪಿ-1 ದಾಖಲಾತಿಗೆ

ನಾನು ಸಹಿ ಮಾಡಿರುವ ಸ್ಥಳವು ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ದಾಖಲಾತಿಯು 4 ಪ್ರತಿಯಲ್ಲಿ ತಯಾರು ಮಾಡಲಾಗಿರುತ್ತದೆ. ಅಪ್ಪಾಯ್ಯ ಆಚಾರ್ ರವರಿಗೆ ಕರಾರು ಪತ್ರದ ಒಂದು ಪ್ರತಿಯನ್ನು ನೀಡಿರುತ್ತದೆ. ಅಪ್ಪಾಯ್ಯ ಆಚಾರ್ ರವರಿಗೆ ನೀಡಿದ ಕರಾರು ಪತ್ರವು ಚಾಪಾ ಕಾಗದದಲ್ಲಿ ತಯಾರು ಮಾಡಿದ ಕರಾರು ಪತ್ರ ಆಗಿರುತ್ತದೆ ನಿಪಿ-1 ಕರಾರು ಪತ್ರವನ್ನು ತಯಾರು ಮಾಡುವ ಸಮಯದಲ್ಲಿ ಒಟ್ಟು 7 ಜನ ಹಾಜರಿದ್ದರು. ನಿಪಿ-1 ಕರಾರು ಪತ್ರವನ್ನು ತಯಾರು ಮಾಡಿರುವ ವ್ಯಕ್ತಿಯು ಸದರಿ ದಾಖಲಾತಿಗೆ ಸಹಿ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ನಿಪಿ-1 ಕರಾರು ಪತ್ರಕ್ಕೆ ಅಲ್ಲಿ ಹಾಜರಿದ್ದ 7 ಜನರು ಸಹಿ ಮಾಡಿರುತ್ತಾರೆ. ನಾನು ಸಹಿ ಮಾಡಿರುವ ಹಾಳೆಯು ಬಿಳಿ ಹಾಳೆ ಎಂದರೆ ಸರಿ. ನನ್ನನ್ನು ಹೊರತುಪಡಿಸಿ ಬೇರೆ ಯಾರು ಕೂಡ ಸದರಿ ದಾಖಲಾತಿಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

9. ದಾವಾ ಆಸ್ತಿಯನ್ನು ಮಾರಾಟ ಮಾಡಲು ನಿರ್ಬಂಧ ಇರುವ ಬಗ್ಗೆ ನಾನು ಪೌಲ್ ಡಿಸೋಜಾ ರವರಿಗೆ ತಿಳಿಸಿರುತ್ತೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರದಿದ್ದರೂ ಪೌಲ್ ಡಿಸೋಜಾ ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪ್ಪಾಯ್ಯ ಆಚಾರ್ ರವರ ವಿರುದ್ದ ನನಗೆ ವೈಮನಸ್ಸು ಇರುವುದರಿಂದ ಪೌಲ್ ಡಿಸೋಜಾ ರವರು ಸೃಷ್ಟಿಸಿರುವ ದಾಖಲೆಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಮಾರು 12-00 ರಿಂದ 1-00 ಗಂಟೆಯ ಸಮಯದಲ್ಲಿ ನಿಪಿ-1 ದಾಖಲೆಗೆ ಸಹಿ ಮಾಡಿರುತ್ತೇನೆ.

ನಾನು ಸಹಿ ಮಾಡುವ ಪೂರ್ವದಲ್ಲಿಯೇ ಅಂತೋನಿಯವರು ನಿಪಿ-1 ದಾಖಲೆಗೆ ಸಹಿ ಮಾಡಿದ್ದರು. ನಾನು ಸಹಿ ಮಾಡುವ ಎಷ್ಟು ಹೊತ್ತಿನ ಪೂರ್ವದಲ್ಲಿ ನಿಪಿ-1 ದಾಖಲೆಗೆ ಸಹಿ ಮಾಡಿದ್ದರು ಎಂದು ನನಗೆ ನೆನಪಿಲ್ಲ. ನಿಪಿ-1 ದಾಖಲೆಗೆ ನಾನು ಒಂದು ಸಹಿ ಹಾಕಿರುತ್ತೇನೆ. ನಾನು ಸಹಿ ಮಾಡಿರುವ ಪೂರ್ವದಲ್ಲಿ ಅಂತೋನಿಯವರು ಸಹಿ ಮಾಡಿದ್ದರೂ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.